ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 19–08–2021

## ಮಾಧ್ಯಮ ಆಹ್ವಾನ
## Media Invitation

**ಪ್ರಗತಿಪರ ಸಾಧನೆಗಳ ಸರದಾರ ಸಾಮಾಜಿಕ ಪರಿವರ್ತನೆಯ ಹರಿಕಾರ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ 106ನೇ ಜನ್ಮದಿನಾಚರಣೆ ಹಾಗೂ ಡಿ.ದೇವರಾಜ ಅರಸು ಪ್ರಶಸ್ತಿ ಪ್ರದಾನ ಸಮಾರಂಭ:**

**ಡಿ.ದೇವರಾಜ ಅರಸು ಅವರ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ:**
**ಬಸವರಾಜ ಎಸ್. ಬೊಮ್ಮಾಯಿ,**
**ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

**ಉಪಸ್ಥಿತಿ:**
**ಕೋಟ ಶ್ರೀನಿವಾಸ ಪೂಜಾರಿ**
**ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ.**

**ಅಧ್ಯಕ್ಷತೆ:**
**ರಿಜ್ವಾನ್ ಅರ್ಷದ್,**
**ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ.**

**ದಿನಾಂಕ: 20–08–2021, ಶುಕ್ರವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ**
**ಸ್ಥಳ: ವಿಧಾನಸೌಧದ ಪಶ್ಚಿಮ ದ್ವಾರ, ವಿಧಾನಸೌಧ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ
## PRESS RELEASE

## ಛಾಯಾಚಿತ್ರ ಶೀರ್ಷಿಕೆ:

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯ ರೇಷ್ಮೆ ಇಲಾಖೆ ಸುಮಾರು 300 ಅಧಿಕಾರಿ / ನೌಕರರಿಗೆ ಮುಂಬಡ್ತಿ ನೀಡಲು ಸಹಕರಿಸಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ಅಧ್ಯಕ್ಷರಾದ ಷಡಕ್ಷರಿ ಅವರನ್ನು ರೇಷ್ಮೆ ಇಲಾಖೆ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಇಲಾಖೆಯ ಡಿ.ವಿ.ಚೇತನ್ ರಾಜು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

## ಸಹಕಾರಿ ಚಳುವಳಿಯಲ್ಲಿ ಪಾಲ್ಗೊಂಡವರು ಅರ್ಪಣಾ ಮನೋಭಾವದಿಂದ ತೊಡಗಿಸಿಕೊಳ್ಳಬೇಕು –ಗೃಹ ಸಚಿವ ಅರಗ ಜ್ಞಾನೇಂದ್ರ

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

ಸಹಕಾರಿ ಚಳುವಳಿಯಲ್ಲಿ ಪಾಲ್ಗೊಂಡವರು ಅರ್ಪಣಾ ಮನೋಭಾವದಿಂದ ತೊಡಗಿಸಿಕೊಂಡರೆ ಬಡತನದಿಂದ ನಲುಗುತ್ತಿರುವ ಜನತೆಯನ್ನು ಆರ್ಥಿಕವಾಗಿ ಸಬಲಗೊಳಿಸಲು ಸಾಧ್ಯವೆಂದು ಗೃಹ ಸಚಿವರಾದ ಅರಗ ಜ್ಞಾನೇಂದ್ರರವರು ಅಭಿಪ್ರಾಯಪಟ್ಟರು.

ಸಚಿವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಆಡಳಿತ ಮಂಡಳಿ ಸದಸ್ಯರಿಂದ ಸತ್ಕಾರ ಸ್ವೀಕರಿಸಿ ಮಾತನಾಡುತ್ತಾ, ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಮಂತ್ರಿಗಳಾದ ಅಮಿತ್‌ಶಾ ಅವರ ದೂರದೃಷ್ಟಿ ಫಲವಾಗಿ, ಕೇಂದ್ರದಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಪ್ರತ್ಯೇಕ ಸಹಕಾರಿ ಸಚಿವ ಖಾತೆಯನ್ನು ಸೃಜಿಸಿದ್ದಾರೆ ಎಂದು ತಿಳಿಸಿದರು.

ಸ್ವತಃ ಸಹಕಾರಿಯು ಆಗಿರುವ ಗೃಹ ಸಚಿವರು ನಾನು ಎಲ್ಲಿದ್ದರೂ ಸಹಕಾರಿ ಮತ್ತು ಯಾವುದಾದರೂ ಸಹಕಾರಿ ಸಂಸ್ಥೆ, ಯಶಸ್ವಿ ಸಾಧಿಸಿದೆ ಎಂದು ತಿಳಿದರೆ, ನನ್ನಷ್ಟು ಸಂತೋಷ ಪಡುವ ವ್ಯಕ್ತಿ ಬೇರೆ ಇಲ್ಲ ಎಂದರು.

ಕಷ್ಟ ಹಾಗೂ ಬಡತನ ಕುಟುಂಬದ ಜನರನ್ನು ಆರ್ಥಿಕ ಸಂಕಷ್ಟದಿಂದ ಪಾರುಮಾಡುವ ದಿಸೆಯಲ್ಲಿ ಸಹಕಾರಿ ಸಂಸ್ಥೆಗಳು ಶ್ಲಾಘನೀಯ ಸೇವೆ ಸಲ್ಲಿಸುತ್ತಿವೆ ಎಂದು ತಿಳಿಸಿದ ಸಚಿವರು, ಖಾಸಗಿ ಹಣಕಾಸು ಸಂಸ್ಥೆಗಳು ಹಾಗೂ ಲೇವಾದೇವಿಯ ವ್ಯಕ್ತಿಗಳ ಕಪಿಮುಷ್ಠಿಯಿಂದ ಬಡಜನತೆ ಮುಕ್ತಿ ಪಡೆಯಲು ಸಹಕಾರಿ ಸಂಸ್ಥೆಗಳು ನೆರವಾಗಿವೆ ಎಂದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ರಾಜ್ಯಾಧ್ಯಕ್ಷರಾದ ಕೃಷ್ಣರೆಡ್ಡಿಯವರು ಮಾತನಾಡುತ್ತಾ, ಗೃಹ ಸಚಿವರಾದ ಅರಗ ಜ್ಞಾನೇಂದ್ರರವರು ಸಹಕಾರಿ ಚಳುವಳಿಯಲ್ಲಿ ತೊಡಗಿಸಿಕೊಂಡ ಅಗ್ರಗಣ್ಯ ಸಹಕಾರಿ ನಾಯಕರಲೊಬ್ಬರು ಎಂದು ತಿಳಿಸಿದರಲ್ಲದೇ ಪ್ರಸ್ತುತ ರಾಜ್ಯ ಸರ್ಕಾರದ ಮುಂದಿರುವ ಸೌಹಾರ್ಧ ಸಹಕಾರಿ ಸಂಸ್ಥೆಗಳ ತಿದ್ದುಪಡಿ ಮಸೂದೆಯನ್ನು ಜಾರಿಗೊಳಿಸಲು ನೆರವಾಗಬೇಕೆಂದು ಮನವಿಯನ್ನು ಸಲ್ಲಿಸಿದರು. ರಾಜ್ಯದಲ್ಲಿ ಒಟ್ಟು 5300 ಸೌಹಾರ್ಧ ಸಹಕಾರ ಸಂಸ್ಥೆಗಳಿದ್ದು, ಸುಮಾರು 50ಲಕ್ಷ ಸದಸ್ಯರಿದ್ದಾರೆ ಎಂದು ತಿಳಿಸಿದರು.

## ಕೆಎಸ್‌ಆರ್‌ಟಿಸಿಯು ಕೋವಿಡ್ ಸಮಯದಲ್ಲಿ ಅನುಷ್ಠಾನಗೊಳಿಸಿದ ಉಪಕ್ರಮಗಳಿಗೆ ರೋಟರಿ 3190 ಡಿಸ್ಟ್ರಿಕ್‌ನ ಸಾಮಾಜಿಕ ಕಳಕಳಿಯ ಪ್ರಶಸ್ತಿ ಲಭ್ಯ

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕೊವಿಡ್ ಸಮಯದಲ್ಲಿ ಅನುಷ್ಠಾನಗೊಳಿಸಿದ ಸಾಮಾಜಿಕ ಕಳಕಳಿಯ ಉಪಕ್ರಮಗಳಾದ "ಮೊಬೈಲ್ ಫೀವರ್ ಕ್ಲಿನಿಕ್"ಗೆ ನಿಗಮದ ಹಳೆಯ ಬಸ್ಸುಗಳನ್ನು ಉಪಯೋಗಿಸಿಕೊಂಡು ಆಂತರಿಕಾಗಿ ನಿಗಮದ ಕಾರ್ಯಾಗಾರಗಳಲ್ಲಿಯೇ 20 ಮೊಬೈಲ್ ಫೀವರ್ ಕ್ಲಿನಿಕ್ ಬಸ್ಸುಗಳನ್ನು ನಿರ್ಮಿಸಿದ್ದರಿಂದ ರೋಟರಿ 3190 ಡಿಸ್ಟ್ರಿಕ್‌ನ ಸಾಮಾಜಿಕ ಕಳಕಳಿಯ ಪ್ರಶಸ್ತಿ ಲಭಿಸಿದೆ.

ಪ್ರಾದೇಶಿಕ ಕಾರ್ಯಾಗಾರ, ಬೆಂಗಳೂರಿನಲ್ಲಿ ಆಂತರಿಕವಾಗಿ ಲಭ್ಯವಿರುವ ವಸ್ತುಗಳಲ್ಲಿ ಮಿನಿ ಬಸ್‌ನ್ನು "ಸಾರಿಗೆ ಸಂಜೀವಿನಿ ಆಂಬುಲೆನ್ಸ್" ಆಗಿ ಪರಿವರ್ತಿಸಲಾಗಿತ್ತು. ರೋಟರಿ ಆಡ್ವಿಕಾ ನಯೋನಿಕಾ 200 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್ ಶ್ರೀ ಬಸವೇಶ್ವರ ಬಸ್ ನಿಲ್ದಾಣ, ಬೆಂಗಳೂರಿನಲ್ಲಿ ಒದಗಿಸಲಾಗಿತ್ತು, "ಸ್ಯಾನಿಟೈಜರ್ ಬಸ್ಸು"ಗಳನ್ನು ಸಹ ನಿರ್ಮಿಸಲಾಗಿದೆ.

ಕೆಎಸ್‌ಆರ್‌ಟಿಸಿಯು ಒಂದು ಅನುಪಯುಕ್ತ ಬಸ್ಸನ್ನು (Scrap Bus) ಸುಸಜ್ಜಿತಾ "ಸ್ತ್ರೀ ಶೌಚಾಲಯ"ವನ್ನಾಗಿ ನಿರ್ಮಿಸಿ ಬೆಂಗಳೂರು ಮತ್ತು ದಾವಣಗೆರೆಯಲ್ಲಿ ಬಸ್ ನಿಲ್ದಾಣಗಳಲ್ಲಿ ಬಳಸಲಾಗುತ್ತಿದೆ. ಅದೇ ರೀತಿ, ಹಳೆಯ ಐರಾವತ ಹವಾನಿಯಂತ್ರಿತ ಬಸ್ಸನ್ನು ಮೆ: ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯವರಿಗೆ ಉಚಿತವಾಗಿ ನೀಡಿ, ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯ ಜನರಿಗೆ ಪ್ರಾಥಮಿಕ ಹಂತದಲ್ಲಿ ಕ್ಯಾನ್ಸರ್ ಬಗ್ಗೆ ತಿಳುವಳಿಕೆ ಮೂಡಿಸುವ ಹಾಗೂ ಪ್ರಾಥಮಿಕ ಹಂತದಲ್ಲಿ ಕ್ಯಾನ್ಸರ್ ಗುರುತಿಸುವಿಕೆಗಾಗಿ ಮೊಬೈಲ್ ರಕ್ತದಾನದ "ಬ್ಲಡ್ ಬ್ಯಾಂಕ್" ಬಸ್ಸನ್ನಾಗಿ ಉಪಯೋಗಿಸಲಾಗುತ್ತಿದೆ.

ದೇಶದ ಸಾರಿಗೆ ನಿಗಮಗಳಲ್ಲಿಯೇ ಮೊದಲ ಪ್ರಯತ್ನವಾಗಿ "ಸಾರಿಗೆ ಸುರಕ್ಷಾ" ಸಂಚಾರಿ –ಐಸಿಯು ಆಕ್ಸಿಜನ್/ ವೆಂಟಿಲೇಟರ್ ವ್ಯವಸ್ಥೆಯುಳ್ಳ 5 ಹಾಸಿಗೆಯ ಐಸಿಯು ಬಸ್ಸನ್ನು ಆಂತರಿಕವಾಗಿ ನಿರ್ಮಿಸಿ, ನಿಗಮದ ಪುತ್ತೂರು ವಿಭಾಗದ ವ್ಯಾಪ್ತಿಯಲ್ಲಿನ 21 ಗ್ರಾಮಗಳ 1303 ಮಂದಿ ಈಗಾಗಲೇ ಇದರ ಪ್ರಯೋಜನ ಪಡೆದಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## The initiatives implemented by KSRTC during COVID have been awarded under corporate social responsibility by the Rotary 3190 District

Bengaluru, August 19 ( Karnataka Information):

Over 20 mobile Fever Clinic buses were built in-house in our workshops by converting old buses as "Mobile Fever Clinic" and a mini bus was converted into a "Sarige Sanjeevani Ambulance" at regional workshop, Bengaluru. The Rotary Advika Nayonika 200-beds COVID Care Center was provided at Sri Basaveshwara Bus Station, Bangalore. "Sanitizer buses" were also built.

KSRTC has made use of scarp buses as "Sthree toilet" and is being used at Bengaluru and Davanagere bus stations. Similarly, the old Airavat air-conditioned bus is given at free of cost to KIDWAI CANCER hospital and has been converted as mobile blood donation bank for rural areas "Blood Bank" for primary cancer awareness and early detection of Cancer.

"Sarige Suraksha" ICU on Wheels, first of its kind initiative in the STUS of the country . Oxygen / Ventilator support 5-beded ICU bus built in-house, the said bus deployed at Puttur Division and 1303 people from 21 villages have benefited from this bus.

The above initiatives implemented during COVID times have been recognized by ROTARY 3190 and awarded under corporate social responsibility initiatives.

## Responding to Climate Change: What should Karnataka and India do

**Organised by Institute for Social and Economic Change (ISEC), on August 19, 2021**

Bengaluru, August 19 ( Karnataka Information):

The Intergovernmental Panel on Climate Change (IPCC) AR 6 report has concluded that the Earth's climate is getting so warm that temperatures in about a decade will probably go past the warning level. Issuing `code red for humanity', the report outlines the implications for humans all over the planet. In view of the bleak picture painted by the IPCC Report, the Institute for Social and Economic Change (ISEC), Bengaluru, organized a webinar entitled Responding to Climate Change: What should Karnataka and India do? on 19$^{th}$ August 2021, to discuss relevant research by ISEC faculty. Prof. Rajasekhar, Director In-charge, ISEC welcomed the audience and Prof. K.V. Raju, Economic Advisor to UP's Chief Minister, moderated the discussion.

Prof Krishna Raj, Professor, Centre of Economic Studies and Policy, ISEC, highlighted the issue of high carbon economy that has resulted in rise of temperature by 1 degree Celsius, which in turn cost around 5 per cent of the GDP. He observed that Bangalore city will face acute drinking water shortage in the coming years with the reduction in water availability in the Cauvery River basin mainly due to variation in precipitation levels. As per the Climate Policy Initiative's on Global Climate Finance, 2019, 44% and 56% respectively constitute public and private finances. He pointed out the main concern which is that about 93% of the total public and private finances flow to mitigation activities and adaptation activities receive less than 7%. While India wants to increase the forest cover aimed at reducing CO2 levels by 2030, deficient climate finances may limit realizing the climate targets.

Dr. Balasubramaniam, Assistant Professor, Centre for Ecological Economics and Natural Resources, ISEC, spoke on how the current and future global mean temperature impacts vulnerable populations such as scheduled caste,

scheduled tribe, elderly population, women, and children. In Karnataka, 65 percent of the households were highly vulnerable and 30 percent of households were less vulnerable and only 5 percent of the households were moderately vulnerable. Thus, he emphasized that urgent need for mitigation and adaptation to climate change would reduce climate extreme events in the state and the vulnerability of households.

Prof. Kala S Sridhar, Professor, Centre for Research in Urban Affairs, ISEC raised questions on two aspects of urbanization: 'While cities are blamed for climate change, is urbanization leading to this in India? Are cities to be blamed for depleting agricultural income?' At the country level for India, using time series data from World Development Indicators, she presented evidence on the causes of carbon emissions, correcting for stationarity, and finds that urbanization has no effect. At the district level, she indicated that climate change indicators such as rainfall, extreme temperature differences, and urbanization do not affect agricultural income. In some specifications, urbanization actually led to increased agricultural income. Coastal districts experienced decreased agricultural income. As a way forward, Prof Kala indicated the need to depend on renewable sources of energy and reducing vehicle emissions in cities by encouraging public transport.

Prof Sunil Nautiyal, Professor, Centre for Ecological Economics and Natural Resources at ISECand highlighted that, keeping India as a whole, macro-level study will not support policy formulations due to diversified ecology. Hence, his work focused on resilient socio-ecological systems gives importance to three major points: i) assessment and monitoring of resources (estimation of status, quality and quantity and accessibility of resources); ii) Conservation aspects (biological origin of economic process and human problems associated to conservation and conflicts) iii) sustainable utilization of resources for sustaining the livelihoods. As a way forward, he indicated solutions (conservation and livelihood enhancement, conservation carbon sink and livelihood enhancement, co-existence in protected areas) for sustainable management of ecosystem at the micro-level.

Dr. Manasi, Associate Professor, Centre for Research in Urban Affairs, ISECspoke on the implications of ground water overexploitation in peri urban areas given their positioning since they belong either to rural or urban areas, thus being vulnerable to climate change risks. Drawing from a micro level study conducted on vulnerabilities in Karnataka, reference was made to land use change and groundwater overuse resulting an increase in defunct bore wells and negligence of water bodies. She also indicated the need for micro level studies for better understanding of local problems and finding innovative solutions to achieve Climate Action.

Prof. K.V. Raju, in his final remarks, remarked that further empirical research studies are to be taken up for policy on mining, renewable resources given its importance in the current context. Dr. Sobin George, Assistant Professor, Centre for Study of Social Change and Development ISEC, proposed the vote of thanks.

## ಸಚಿವರ ಪ್ರವಾಸ

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

ವಸತಿ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರಾದ ವಿ.ಸೋಮಣ್ಣ ಅವರು ಆಗಸ್ಟ್ 21 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಆಗಮಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಎಸ್‌ಸಿ/ಎಸ್‌ಟಿ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡಲು ಅರ್ಜಿ ಆಹ್ವಾನ

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

2020–21ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆ ಅಡಿಯಲ್ಲಿ 2020ನೇ ಕ್ಯಾಲೆಂಡರ್ ವರ್ಷದಲ್ಲಿ ಅಂತರ್ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಹಧನ ನೀಡಲು ಆಫ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ಆಯಾ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ದೃಢೀಕರಿಸಿ ಸೆಪ್ಟೆಂಬರ್ 20 ರೊಳಗೆ ಕೇಂದ್ರ ಕಛೇರಿಗೆ ಕಳುಹಿಸಿಕೊಡಬೇಕು.

ಅರ್ಜಿಗಳನ್ನು ನೇರವಾಗಿ ಕೇಂದ್ರ ಕಛೇರಿಯಲ್ಲಿ ಸ್ವೀಕರಿಸುವುದಿಲ್ಲ ಹಾಗೂ ಕೊನೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ಪ್ರೋತ್ಸಾಹಧನಕ್ಕೆ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಹಿಂದುಳಿದ ವರ್ಗಗಳ ಜನಾಂಗದವರಿಗೆ ದೇವರಾಜ ಅರಸು ಪ್ರಶಸ್ತಿ ಪ್ರದಾನ

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ ಜನ್ಮ ದಿನಾಚರಣೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಆಚರಿಸಲಾಗುತ್ತಿದ್ದು, ಈ ಸಮಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಹಿಂದುಳಿದ ವರ್ಗಗಳ ಜನಾಂಗವನ್ನು ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿರುವ ಅರ್ಹ ವ್ಯಕ್ತಿ ಹಾಗೂ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಿ ಗೌರವಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಹೇಳಿದರು.

ಇಂದು ವಿಧಾನಸೌಧದಲ್ಲಿ ಕರೆಯಲಾದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, 2019-20ನೇ ಸಾಲಿಗೆ ಬೆಳಗಾವಿ ಜಿಲ್ಲೆ ಅಥಣಿಯ ಶ್ರೀ ಬಸವಪ್ರಭು ಪಾಟೀಲರವರನ್ನು, 2020-21ನೇ ಸಾಲಿಗೆ ಬೆಂಗಳೂರು ಸುಮಂಗಲಿ ಸೇವಾಶ್ರಮದ ಶ್ರೀಮತಿ ಎಸ್.ಜಿ.ಸುಶೀಲಮ್ಮ ಇವರನ್ನು 2021-22ನೇ ಸಾಲಿಗೆ ಬೆಂಗಳೂರಿನ ಕರ್ನಾಟಕ ಅಲೆಮಾರಿ/ ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಒಕ್ಕೂಟದ ಕೆ.ಭಾಸ್ಕರ್‌ದಾಸ್ ಎಕ್ಕಾರು ಇವರಿಗೆ ದೇವರಾಜು ಅರಸು ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದು ಎಂದು ತಿಳಿಸಿದರು.

ಡಿ.ದೇವರಾಜ ಅರಸು ಪ್ರಶಸ್ತಿಯು ರೂ. 5ಲಕ್ಷ ನಗದು, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಯನ್ನು ಒಳಗೊಂಡಿರುತ್ತದೆ. ಆಗಸ್ಟ್ 20ರಂದು ಅರಸು ಅವರ 106ನೇ ಜನ್ಮದಿನಾಚರಣೆಯನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದು ಅಂದು ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಶಸ್ತಿಯನ್ನು ಪ್ರದಾನ ಮಾಡಲಿರುವರು ಎಂದು ತಿಳಿಸಿದರು.

## ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ನೋಂದಾಯಿಸಲು ಅರ್ಜಿ ಆಹ್ವಾನ

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

ಕೋವಿಡ್-19ರ ಹಿನ್ನೆಲೆಯಲ್ಲಿ 2020-21ನೇ ಸಾಲಿನ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಯನ್ನು ವಿದ್ಯಾರ್ಥಿಗಳ ಸುರಕ್ಷತಾ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಸರಳೀಕರಿಸಿ, ಸೆಪ್ಟೆಂಬರ್ -2021ರ ಮಾಹೆಯಲ್ಲಿ ಒಂದು ದಿನ ಕೋರ್ ವಿಷಯಗಳು ಮತ್ತು ಮತ್ತೊಂದು ದಿನ ಭಾಷಾ ವಿಷಯಗಳ ಪರೀಕ್ಷೆಯನ್ನು ನಡೆಸಲು ಸರ್ಕಾರವು ಆದೇಶಿಸಿದ್ದು, ಅದರಂತೆ ಸೆಪ್ಟೆಂಬರ್ - 2021ರ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಗೆ ಅರ್ಹ ವಿದ್ಯಾರ್ಥಿಗಳನ್ನು ನೋಂದಾಯಿಸಲು ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಪರೀಕ್ಷೆಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003ನ್ನು ಸಂಪರ್ಕಿಸಬಹದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಬೆಂಗಳೂರು ಜಲಮಂಡಳಿಯಿಂದ ಜಲಸ್ಪಂದನ ಕಾರ್ಯಕ್ರಮ

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಜಲಮಂಡಳಿಯು ನೀರು ಮತ್ತು ಒಳಚರಂಡಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಲು ಪ್ರತಿ ಮೂರನೇ ಶನಿವಾರ ಜನ ಸ್ನೇಹಿ ಹೆಜ್ಜೆಯಾದ "ಜಲ ಸ್ಪಂದನ" ಕಾರ್ಯಕ್ರಮವನ್ನು ದೂರವಾಣಿ ಮುಖಾಂತರ ಆಗಸ್ಟ್ 21 ರಂದು ಬೆಳಿಗ್ಗೆ: 10:00 ರಿಂದ ಮಧ್ಯಾಹ್ನ 01:00 ರವರೆಗೆ 16 ವಿವಿಧ ಸ್ಥಳಗಳಲ್ಲಿ ಪ್ರಧಾನ ಮುಖ್ಯ ಅಭಿಯಂತರರು ಮತ್ತು ಅಪರ ಮುಖ್ಯ ಅಭಿಯಂತರರುಗಳ ಸಮ್ಮುಖದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಲಸ್ಪಂದನ ಕಾರ್ಯಕ್ರಮದ ವಿಭಾಗದ ವ್ಯಾಪ್ತಿಗಳು ಆರ್.ಆರ್. ನಗರ, ದಾಸರಹಳ್ಳಿ , 110 ಹಳ್ಳಿಗಳು ದೂರವಾಣಿ ಸಂಖ್ಯೆ: 080–22879549, ಬೊಮ್ಮನಹಳ್ಳಿ ವ್ಯಾಪ್ತಿ 110 ಹಳ್ಳಿಗಳು ದೂರವಾಣಿ ಸಂಖ್ಯೆ: 080–22945237, 9845444097, ಮಹಾದೇವಪುರ ವ್ಯಾಪ್ತಿ 110 ಹಳ್ಳಿಗಳು ದೂರವಾಣಿ ಸಂಖ್ಯೆ: 9591987965, ಕಾನಿಅ (ನೈರುತ್ಯ) ವಿಭಾಗ ಚಾಮರಾಜಪೇಟೆ, ಜೆ.ಜೆ.ಆರ್. ನಗರ, ವಿವಿಪುರಂ, ಕೆ.ಜಿ.ನಗರ, ಕತ್ರಿಗುಪ್ಪೆ, ಹೊಸಕೆರೆಹಳ್ಳಿ, ಇಟ್ಟಮಡು, ದೇವಗಿರಿ, ಎಂ.ಎನ್.ಕೆ. ಬಿ.ಟಿ.ಆರ್. ನಾಗೇಂದ್ರ ಬ್ಲಾಕ್, ಮೌಂಟ್ ಜಾಯ್, ಪೂರ್ಣಪ್ರಜ್ಞಾ ಲೇಔಟ್, ಬನಶಂಕರಿ–1&2, ಕುಮಾರಸ್ವಾಮಿ ಲೇಔಟ್, ಇಸ್ರೋ ಲೇಔಟ್. ದೂರವಾಣಿ ಸಂಖ್ಯೆ: 080–22945196, ಕಾ.ನಿ.ಅ. ಆಗ್ನೇಯ (1)ವಿಭಾಗ ಸಿ.ಎಲ್.ಆರ್, ದೊಮ್ಮಲೂರು, ಜಾನ್ಸನ್ ಮಾರ್ಕೆಟ್, ಹಲಸೂರು, ಬೈಯಪ್ಪನಹಳ್ಳಿ, ಭುವನೇಶ್ವರಿ ನಗರ, ಎಚ್.ಎ.ಎಲ್, ಇಂದಿರಾನಗರ, ಜೀವನ್‌ಭೀಮಾನಗರ, ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ದೂರವಾಣಿ ಸಂಖ್ಯೆ: 9845444054, ಕಾ.ನಿ.ಅ. (ವಾಯುವ್ಯ–2) ವಿಭಾಗ ಎಂ.ಇ.ಐ. ಲೇಔಟ್ (1&2), ಹೆಗ್ಗನಗಳ್ಳಿ, ಪೀಣ್ಯ, ಪೀಣ್ಯ ದಾಸರಹಳ್ಳಿ, ಬಾಹುಬಲಿ ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶ ದೂರವಾಣಿ ಸಂಖ್ಯೆ: 080–23311337, 9740984165, ಕಾ.ನಿ.ಅ. (ವಾಯುವ್ಯ)–1 ವಿಭಾಗ ಕೇತಮಾರನಹಳ್ಳಿ, ಮಹಾಲಕ್ಷ್ಮಿ ಲೇಔಟ್, ನಂದಿನಿ ಲೇಔಟ್, ರಾಜಾಜಿನಗರ, ಎ.ಡಿ.ಹಳ್ಳಿ, ಕಮಲಾನಗರ/ಕಾಮಾಕ್ಷಿಪಾಳ್ಯ, ವೆಸ್ಟ್ ಆಫ್ ಕಾರ್ಡ್ ರೋಡ್–1, ಅನ್ನಪೂರ್ಣೇಶ್ವರಿನಗರ, ನಾಗರಭಾವಿ, ಸರ್.ಎಂ.ವಿಶ್ವೇಶ್ವರಯ್ಯ–1 ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ದೂರವಾಣಿ ಸಂಖ್ಯೆ: 080–23491123, 9740984166, ಕಾ.ನಿ.ಅ. (ಈಶಾನ್ಯ) ವಿಭಾಗ, ಮಲ್ಲೇಶ್ವರಂ, ಶ್ರೀರಾಮಪುರ, ಯಶವಂತಪುರ, ಭಾಷ್ಯಂಪಾರ್ಕ್, ಕೆಂಪೇಗೌಡ ಟವರ್, ಕುಮಾರ ಪಾರ್ಕ್, ಜಯಮಹಲ್, ಆರ್.ಟಿ.ನಗರ, ಆನಂದನಗರ, ಗಂಗಾನಗರ, ಮನೋರಾಯನ ಪಾಳ್ಯ, ನ್ಯೂ ಬಿ.ಇ.ಎಲ್. ರಸ್ತೆ, ಸಂಜಯನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ದೂರವಾಣಿ ಸಂಖ್ಯೆ: 080–22945124, ಬ್ಯಾಟರಾಯನಪುರ ವ್ಯಾಪ್ತಿ 110 ಹಳ್ಳಿಗಳು ದೂರವಾಣಿ ಸಂಖ್ಯೆ: 9886179260, ಕಾ.ನಿ.ಅ. ಆಗ್ನೇಯ (2) ವಿಭಾಗ ಬಿ.ಟಿ.ಎಮ್. ಲೇಔಟ್ –1, 2, ಕೋರಮಂಗಲ –1&2, ಬೆಳ್ಳಂದೂರು. ಜೆ.ಪಿ.ನಗರ–1 & 3 ನೇ ಹಂತ, ಜಯನಗರ ಟಿ.ಬ್ಲಾಕ್, ಜಯನಗರ, ಹೊಂಬೇಗೌಡ ನಗರ, ಭೈರಸಂದ್ರ–1 ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ದೂರವಾಣಿ ಸಂಖ್ಯೆ: 080–22945389, ಕಾ.ನಿ.ಅ. (ಪೂರ್ವ)–1 ವಿಭಾಗ ಎ.ಇ.ಸಿ.ಎಸ್. ಲೇಔಟ್–1&2, ಹೂಡಿ, ಎ.ನಾರಾಯಣಪುರ, ಎಚ್.ಎ.ಎಲ್ ಏರ್‌ಪೋರ್ಟ್, ವಿಜ್ಞಾನನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶ ದೂರವಾಣಿ ಸಂಖ್ಯೆ: 080–22945158, 9845444097, ಕಾ.ನಿ.ಅ. (ಪೂರ್ವ)–2 ವಿಭಾಗ [ಹಳೆಯ ಕಾನಿಅ(ಪೂ)] ಬಾಣಸವಾಡಿ, ಹೆಚ್.ಬಿ.ಆರ್, ಹೆಚ್.ಆರ್.ಬಿ.ಆರ್.ಲೇಔಟ್, ಲಿಂಗರಾಜಪುರಂ, ಕೆ.ಆರ್.ಪುರಂ, ಓ.ಎಂ.ಬಿ.ಆರ್.ಲೇಔಟ್, ದೇವಸಂದ್ರ ಸೇವಾಠಾಣೆ, ರಾಮಮೂರ್ತಿನಗರ, ವಿಜಿನಾಪುರ ಸೇವಾಠಾಣೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು ದೂರವಾಣಿ ಸಂಖ್ಯೆ: 080–22945200, ಕಾ.ನಿ.ಅ. (ಉತ್ತರ) ವಿಭಾಗ ಯಲಹಂಕ ಓಲ್ಡ್‌ಟೌನ್, ಯಲಹಂಕ ನ್ಯೂಟೌನ್, ಸಹಕಾರ ನಗರ, ಜಕ್ಕೂರು, ವಿದ್ಯಾರಣ್ಯಪುರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ದೂರವಾಣಿ ಸಂಖ್ಯೆ: 9845444139, ಕಾ.ನಿ.ಅ. (ಕೇಂದ್ರ) ವಿಭಾಗ ಎಲ್.ಎಲ್.ಆರ್.ಸೇವಾಠಾಣೆ, ಚಿಕ್ಕಲಾಲ್ ಬಾಗ್, ಬನ್ನಪ್ಪ ಪಾರ್ಕ್, ಸುಧಾಮನಗರ, ಹೈಗ್ರೌಂಡ್ಸ್ (ಹೆಚ್.ಜಿ.ಆರ್), ಕೋಲ್ಸ್‌ಪಾರ್ಕ್, ಫ್ರೇಜರ್ ಟೌನ್, ಮಚಲಿಬೆಟ್ಟ, ಪಿಳ್ಳಣ್ಣ ಗಾರ್ಡನ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ದೂರವಾಣಿ ಸಂಖ್ಯೆ: 080–22945187, 9845444078, ಕಾ.ನಿ.ಅ. (ಪಶ್ಚಿಮ) ವಿಭಾಗ ಮಾಗಡಿ ರಸ್ತೆ, ಹೊಸಹಳ್ಳಿ, ಮೈಸೂರು ರಸ್ತೆ, ಕೆಂಗೇರಿ ಸ್ಯಾಟಲೈಟ್ ಟೌನ್, ಐಡಿಯಲ್ ಹೋಮ್ (ಬಿ,ಇ.ಎಮ್.ಎಲ್ ಲೇಔಟ್), ಬಿ.ಇ.ಎಂ.ಎಲ್.,ಲೇಔಟ್, ಚಂದ್ರಲೇಔಟ್–1 , ಮೂಡಲಪಾಳ್ಯ, ವಿಜಯನಗರ ಒ.ಹೆಚ್.ಟಿ. ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ದೂರವಾಣಿ ಸಂಖ್ಯೆ: 9591987962, ಕಾ.ನಿ.ಅ. (ದಕ್ಷಿಣ) ವಿಭಾಗ ಅರಕೆರೆ ಲೇಔಟ್, ಜೆ.ಪಿ.ನಗರ ಸೇವಾಠಾಣೆ, ಜಂಬೂಸವಾರಿ ದಿಣ್ಣೆ ಸೇವಾಠಾಣೆ, ಕೊತ್ತನೂರು

ದಿಣ್ಣೆ, ವಿಜಯಬ್ಯಾಂಕ್ ಲೇಔಟ್ ಹೆಚ್.ಎಸ್. ಆರ್.ಲೇಔಟ್, ಕೋಡಿಚಿಕ್ಕನ ಹಳ್ಳಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ದೂರವಾಣಿ ಸಂಖ್ಯೆ: 080–22945143 ನ್ನು ಆಯಾ ವ್ಯಾಪ್ತಿಯ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಳನ್ನು www.bwssb.gov.in ನಲ್ಲಿ ಪಡೆದುಕೊಳ್ಳಬಹುದು. ಮಂಡಳಿಯ ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ರಕ್ಷಣಾ ಕಾರ್ಯಗಳಲ್ಲಿ ಅಗ್ನಿಶಾಮಕದಳ ತೋರುವ ಧೈರ್ಯ ಮೆಚ್ಚುವಂತದು

– ಗೃಹ ಸಚಿವ ಅರಗ ಜ್ಞಾನೇಂದ್ರ

ಬೆಂಗಳೂರು ಆಗಸ್ಟ್ 19 (ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯದ ಅಗ್ನಿ ಶಾಮಕ ದಳ ಅತ್ಯಂತ ಶಕ್ತಿಶಾಲಿಯಾಗಿದೆ. ತುರ್ತು ಸಮಯದಲ್ಲಿ ಅವಗಡಗಳು ಸಂಭವಿಸಿದಾಗ, ರಕ್ಷಣಾ ಕಾರ್ಯಕ್ಕೆ ಪ್ರಪ್ರಥಮವಾಗಿ ಮುಂದಾಗುವುದು ಆಗ್ನಿಶಾಮಕ ದಳ. ಅವರ ಧೈರ್ಯ ಮೆಚ್ಚುವಂತಹುದು. ಎಂದು ಗೃಹ ಸಚಿವ ಅರಗಜ್ಞಾನೇಂದ್ರ ತಿಳಿಸಿದರು.

ಅವರು ಇಂದು ಗೃಹ ರಕ್ಷಕ ದಳ ಪೌರರಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಗಳ ನಿರ್ದೇಶನಾಲಯಕ್ಕೆ ಭೇಟಿ ನೀಡಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ ರಕ್ಷಣಾ ಸಲಕರಣೆಗಳ ಪರಿವೀಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವಾಹನಗಳ ಪರಿವೀಕ್ಷಣೆ, ಗೃಹ ರಕ್ಷಕ ದಳ ಹಾಗೂ ಪೌರ ರಕ್ಷಣೆಯ ಮಾದರಿ ಕೊಠಡಿ ಪರಿವೀಕ್ಷಣೆ ಮಾಡಿ ಮಾತನಾಡಿದ ಸಚಿವರು, ರಾಜ್ಯದ ಜನರ ಪ್ರಾಣ ಹಾಗೂ ಆಸ್ತಿಗಳ ರಕ್ಷಣೆಯ ಹೊಣೆಯನ್ನು ಆಗ್ನಿಶಾಮಕದಳವು ಗುರುತರವಾಗಿ ನಿಭಾಯಿಸುತ್ತಿದೆ. ಇತ್ತೀಚೆ ನಡೆದ ಕಟ್ಟಡಗಳಲ್ಲಿನ ಅಗ್ನಿಅವಗಡಗಳು, ಪ್ರಕೃತಿ ವಿಕೋಪದಿಂದ ರಾಜ್ಯದಲ್ಲಿ ಉಂಟಾದ ಅತಿವೃಷ್ಠಿ ಸಮಯದಲ್ಲಿ ಹಾಗೂ ಕಂಪನಿಗಳಲ್ಲಿ ವಿಷಾನಿಲ ಹೊರ ಬಂದಂತಹ ಸಮಯದಲ್ಲಿ ಅಗ್ನಿಶಾಮಕ ದಳವು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ ಜನರ ಪ್ರಾಣ ರಕ್ಷಣೆ ಹಾಗೂ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡಿದೆ.

ಅಗ್ನಿಶಾಮಕ ದಳಕ್ಕೆ ಅಗತ್ಯವಿರುವ ಅತ್ಯಾದುನಿಕ ಉಪಕರಣಗಳನ್ನು ಈಗಾಗಲೇ ತರಿಸಲಾಗಿದೆ. ಅಗತ್ಯ ಬಿದ್ದಲ್ಲಿ ಇನ್ನೂ ಹೆಚ್ಚಿನ ಉಪಕರಣಗಳನ್ನು ಬೇರೆ ರಾಷ್ಟ್ರಗಳಿಂದಲೂ ಸಹ ಖರೀದಿ ಮಾಡಿ ಅಗ್ನಿಶಾಮಕ ದಳವನ್ನು ಹೆಚ್ಚಿನ ರೀತಿಯಲ್ಲಿ ಸಜ್ಜುಗೊಳಿಸಲಾಗುವುದು ಎಂದ ಸಚಿವರು, ಈಗಾಗಲೇ ಸರ್ಕಾರವು ಪೊಲೀಸ್ ಸಿಬ್ಬಂದಿಗೆ ವೇತನವನ್ನು ಹೆಚ್ಚು ಮಾಡಿದೆ, ಅದೇ ಮಾದರಿಯಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ, ಗೃಹ ರಕ್ಷಕದಳದ ಸಿಬ್ಬಂದಿಗಳಿಗೂ ಸಹ ವೇತನವನ್ನು ಮುಂದಿನ ದಿನಗಳಲ್ಲಿ ಪರಿಷ್ಕರಿಸಲು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಇನ್ಸ್‌ಪೆಕ್ಟರ್ ಜನರಲ್ ಪ್ರವೀಣ್ ಸೂದ್, ಗೃಹ ರಕ್ಷಕ ದಳದ ಮಹಾ ನಿರ್ದೇಶಕರಾದ ಅಮರ್‌ಕುಮಾರ್ ಪಾಂಡೆ ಹಾಗೂ ಪೊಲೀಸ್‌ಇಲಾಖೆ ಅಧಿಕಾರಿಗಳು ಅಗ್ನಿಶಾಮಕದಳ ಹಾಗೂ ಗೃಹರಕ್ಷಕ ದಳ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದು.

## ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು

**ದಿನಾಂಕ: 19.8.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 37 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 37 | ಉತ್ತಮ | $PM_{10}$, Ozone |

| | | | | |
|---|---|---|---|---|
| 3 | ಕವಿಕ, ಮೈಸೂರುರಸ್ತೆ | 57 | ತೃಪ್ತಿಕರ | $PM_{2.5}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 34 | ಉತ್ತಮ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 58 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 60 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 55 | ತೃಪ್ತಿಕರ | $PM_{10}$ |
| **(19.8.2021 at 11.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 52 | ತೃಪ್ತಿಕರ | $PM_{10}$ |
| 9 | ಪೀಣ್ಯ | 61 | ತೃಪ್ತಿಕರ | $PM_{2.5}$ |
| 10 | ಬಿಟಿಎಂ ಲೇಔಟ್ | 59 | ತೃಪ್ತಿಕರ | CO |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಶ್ವಾಸಕೋಶದ ಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತ ಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 19.8.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 37 | Good | $PM_{10}$ |
| 2 | Jayanagar 5th Block, Shalini ground | 37 | Good | $PM_{10}$, Ozone |
| 3 | KAVIKA, Mysore Road | 57 | Satisfactory | $PM_{2.5}$ |

| | | | | |
|---|---|---|---|---|
| 4 | Rajeev Gandhi Institute of Chest Disease, NIMHANS, Hombegowda Nagar | 34 | Good | $PM_{10}$ |
| 5 | HSR Layout, near Central Silkboard | 58 | Satisfactory | $PM_{10}$ |
| 6 | City Railway Station, Magestic, Bengaluru | 60 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 55 | Satisfactory | $PM_{10}$ |
| **(19.8.2021 at 11.05 AM)** | | | | |
| 8 | BWSSB, Kadabesanahalli | 52 | Satisfactory | $PM_{10}$ |
| 9 | Peenya | 61 | Satisfactory | $PM_{2.5}$ |
| 10 | BTM Layout | 59 | Satisfactory | CO |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |